ಯೋಜನೆಯಲ್ಲಿ ಈ ರಸ್ತೆಗೆ, ನೀರಾವರಿಗೆ ಇದಕ್ಕೆಲ್ಲಾ ಹಣ ಇರತಕ್ಕಂಥಾದ್ದು ಸ್ವಲ್ಪ ಕಡಿಮೆ ಇದೆ. ಹೀಗಾಗಿ ಅಮರು ನಮ್ಮ ಬೇಡಿಕೆಗಳನ್ನು ಮಾನ್ಯ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅಷ್ಟನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ, ಮಾನ್ಯ ಭೈರೇಗೌಡರು ಏನು ಪ್ರಸ್ತಾಪ ಮಾಡುತ್ತಾ ಇದ್ದರು...

ಶ್ರೀ ಸಿ. ಭೈರೇಗೌಡರು : ಪಕ್ಕದ ರಾಜ್ಯಗಳಾದ ಕೇರಳ, ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶದಲ್ಲಿ ಎಷ್ಟು ರಾಜ್ಯ ಹೆದ್ದಾರಿಗಳನ್ನು, ರಾಷ್ಟ್ರೀಯ ಹೆದ್ದಾರಿಗಳಾಗಿ ಮಾಡಿದ್ದಾರೆ. ಈ ಮಾಹಿತಿಯನ್ನು ಕೊಡುವುದಕ್ಕಾಗುತ್ತದೆಯೇ?

ಶ್ರೀ ಕೆ.ಹೆಚ್. ರಂಗನಾಥ್ : ಈ ವಿಷಯವಾಗಿ ಮಾಹಿತಿ ನನ್ನ ಹತ್ತಿರ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಇದು ನನಗನಿಸುತ್ತದೆ. ಕೇಂದ್ರದ ಮಲತಾಯಿಧೋರಣೆ ಇದು. ನಿಜವಾಗಿಯೂ ನಮ್ಮ ರಾಜ್ಯಕ್ಕೆ ಅವರು ಮಾಡುತ್ತಿರತಕ್ಕ ಅನ್ಯಾಯ. 1972ರಿಂದ ಒಂದು ಹೆದ್ದಾರಿಗೂ ಮಂಜೂರಾತಿ ಕೊಡುತ್ತಾ ಇಲ್ಲ. ಕೇಂದ್ರದ ನೀತಿಯ ವಿರುದ್ಧ ನಾವು ಸಭಾತ್ಯಾಗ ಮಾಡುತ್ತಿದ್ದೇವೆ. ನಿಮಗೆ ಕೇಂದ್ರದ ಮೇಲೆ ಒತ್ತಡ ತರುವುದಕ್ಕಾಗುತ್ತಿಲ್ಲ. ಪಕ್ಕದ ರಾಜ್ಯಗಳಾದ ಕೇರಳ ಮತ್ತಿತರ ರಾಜ್ಯಗಳಿಗೆ ಅನುಕೂಲ ಮಾಡಿದ್ದಾರೆ. ಕರ್ನಾಟಕ ರಾಜ್ಯಕ್ಕೆ ಮೊದಲಿನಿಂದಲೂ ಮೋಸ ಮಾಡುತ್ತಿದ್ದಾರೆ.

(ಗೊಂದಲ)

(ಶ್ರೀ ವಾಟಾಳ್ ನಾಗರಾಜ್, ಶ್ರೀ ಸಿ. ಭೈರೇಗೌಡ ಮತ್ತು ಶ್ರೀ ನಾರಾಯಣರಾವ್ ಮನಹಳ್ಳಿ ಅವರುಗಳು ಸಭಾತ್ಯಾಗ ಮಾಡಿದರು.)

ವಿಷಯ : ಕನಕಪುರ ತಾಲ್ಲೂಕು ಕೋಡಿ ಹಳ್ಳಿ ಹೋಬಳಿ ಚಿಕ್ಕೊಂಡನಹಳ್ಳಿ ಕೆರೆ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 143 (701)

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ ಚಿಕ್ಕೊಂಡನಹಳ್ಳಿ ಕೆರೆ ನಿರ್ಮಾಣ 1961-62ರಲ್ಲಿ ಪ್ರಾರಂಭವಾಗಿ 1975ಕ್ಕೆ ಮುಕ್ತಾಯಗೊಂಡ ಕೆರೆ ನಿರ್ಮಾಣಕ್ಕೆ ಜಮೀನು ಸ್ವಾಧೀನ ಪಡಿಸಿಕೊಂಡಿದ್ದು ಜಮೀನು ಮಾಲೀಕರಿಗೆ ಪರಿಹಾರವಾಗಿ ಇದುವರೆಗೆ ನೀಡಿರುವ ಹಣವೆಷ್ಟು;

ಆ. ಸ್ವಾಧೀನಪಡಿಸಿಕೊಂಡ ಎಲ್ಲಾ ಜಮೀನು ಮಾಲೀಕರಿಗೂ ಪರಿಹಾರ ನೀಡಲಾಗಿದೆಯೇ ಮತ್ತು ಪರಿಹಾರ ಹಣ ನೀಡುವುದು ತುಂಬಾ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಹಾಗಿದ್ದಲ್ಲಿ ಮಾಲೀಕರಿಗೆ ಪರಿಹಾರ ಹಣದ ಜೊತೆಗೆ ಬಡ್ಡಿ ಸೇರಿಸಿ ಪರಿಹಾರ ನೀಡಲಾಗುವುದೆ?